

ಮೊರಾಕ್ಕೊದ ವಿಶೇಷ ಖಾದ್ಯ ಟಜೀನ್
(ಕೆಂಡದಲ್ಲಿ ಬೆಂದ ತರಕಾರಿಗಳು)

ವಾಣಿಜ್ಯ ನಗರಿಗೆ (ಭಾರತಕ್ಕೆ ನಮ್ಮ ಮುಂಬೈ ಇದ್ದಂತೆ). ವಿಮಾನ ನಿಲ್ದಾಣದಲ್ಲಿ ಮೊದಲು ಮೊರಾಕ್ಕೊ ಜನರ ದರ್ಶನವಾದಾಗ ನನಗೆ ಕಂಡಿದ್ದು ಇವರ ನೀಳಕಾಯ. ಇವರ ಮೆಡಿಟರೇನಿಯನ್ ಆಹಾರ ಪದ್ಧತಿ– ಹಣ್ಣು, ತರಕಾರಿ, ಸಾಂಬಾರ, ವ್ಯಂಜನಗಳು ತುಂಬಿದ ಆಹಾರ ಮತ್ತು ನಡಿಗೆಯ ಪರಿಶ್ರಮವೇ ಇದಕ್ಕೆ ಕಾರಣ ಎಂಬುದು ಆನಂತರ ಅರಿತ ಸಂಗತಿ.

ಕಾಸಾಬ್ಲಾಂಕಾನಿಂದ ಮಳೆಯ ಮಧ್ಯೆ ಮೂರು ಗಂಟೆ ಕಾರಿನ ಪ್ರಯಾಣದಲ್ಲಿ ನನಗೆ ಕಂಡಿದ್ದು, ಖರ್ಜೂರ ಮರಗಳ ಸಾಲು ಸಾಲು. ಮಧ್ಯೆ ಅಲ್ಲಲ್ಲಿ ಕಂಡಿದ್ದ ಕಟ್ಟಡಗಳೆಲ್ಲವೂ ಒಂದೇ ಬಣ್ಣ. ಮರಳಿನ ಹಳದಿ ಮಿಶ್ರಿತ ಕಂದು ಬಣ್ಣ (Ochre). ಚಿಕ್ಕ, ದೊಡ್ಡ, ಪೆಟ್ರೋಲ್ ಬಂಕುಗಳ, ಹೋಟೆಲ್‌ಗಳ, ಒಂದೊಂದು ಮನೆಯೂ ಒಂದೇ ಬಣ್ಣ. ಈ ಮನೆಗಳನ್ನು ಕಟ್ಟುವಾಗ ಇಟ್ಟಿಗೆಗಳನ್ನು ಜೇಡಿಮಣ್ಣು, ಮರಳು, ಮಣ್ಣು, ಸುಣ್ಣ, ಪಾಮ್ ಮರದ ಹುಲ್ಲು, ಇತ್ಯಾದಿ ಪರಿಸರಸ್ನೇಹಿ ಸಾಮಗ್ರಿಗಳಿಂದ ತಯಾರಿಸುತ್ತಾರೆ. ಸಾಧ್ಯವಾದಷ್ಟೂ ಭೂಕಂಪವನ್ನು ತಡೆಯಬಲ್ಲ ಮತ್ತು ಅತೀವ ಚಳಿ ಮತ್ತು ಸುಡುಬಿಸಿಲನ್ನು ತಡೆಯಬಲ್ಲ ಸಾಂಪ್ರದಾಯಿಕ ಕಟ್ಟಡಗಳಿಗೆ ಇವರು ಮಹತ್ವ ಕೊಡುತ್ತಾರಂತೆ.

ಮರಕೇಶ್ (Marrakech) ನಿಂದ ನಮ್ಮ ಪ್ರವಾಸ ಆರಂಭಿಸಿದೆವು. ನಾವು ತಂಗಿದ



ಹೋಟೆಲ್ ಒಂದು ವಿಸ್ತಾರವಾದ ಅಂಗಳದ ದೊಡ್ಡಮನೆಯನ್ನು ಪರಿವರ್ತಿಸಿದ್ದು. ರಿಯಾದ್ (Riad) ಅಂತ ಇಂತಹ ಹೋಟೆಲ್‌ಗಳನ್ನು ಕರೆಯುತ್ತಾರೆ. ಒಳಗೆ ಕಾಲಿಟ್ಟ ತಕ್ಷಣ ಚಳಿಯಿಂದ ನಡುಗುತ್ತಿದ್ದ ನಮಗೆ ಬಿಸಿಬಿಸಿಯಾಗಿ ಮೊರಾಕ್ಕೊ ಚಹಾ (ಹಸಿ ಪುದೀನಾ ಎಲೆಗಳು ತೇಲುತ್ತಿದ್ದ ಬಿಸಿ ನೀರು) ಮತ್ತು ಒಣಹಣ್ಣುಗಳು ಅತಿ ಸಿಹಿಯಾದ ಖರ್ಜೂರ, ಪಿಸ್ತಾ, ಬಾದಾಮಿ ಸ್ವಾಗತ ಕೋರಿದವು. ಒಂದೊಂದು ರೂಮಿನ ಚಾವಣಿಗಳಿಗೆ ಅಂದವಾದ ಬಣ್ಣಗಳ ಚೆಲುವಿನ ಚಿತ್ತಾರ ಮತ್ತು ಮರದ ಕೆತ್ತನೆಯ ಮಧ್ಯೆ ತೂಗಾಡುವ ಸುಂದರ ದೀಪಗಳ ಗೊಂಚಲುಗಳು ಮನಸೆಳೆದವು. ಎಲ್ಲ ಬಣ್ಣಗಳೂ ಪೂರ್ಣ ನೈಸರ್ಗಿಕ ಎಂಬ ವಿಷಯವನ್ನು ಒತ್ತಿ ಹೇಳಿದರು.

ಪೂರ್ಣ ಸಸ್ಯಾಹಾರಿಗಳಾದ ನಮಗೆ ಇಡೀ ಮೊರಾಕ್ಕೊ ಎಂಬ ಮುಸ್ಲಿಂ ದೇಶದಲ್ಲಿ ಆಹಾರ ಸಮಸ್ಯೆಯೇ ಆಗಲಿಲ್ಲ. ಅಧಿಕ ಪ್ರಮಾಣದಲ್ಲಿ ರಸಭರಿತ ಕಿತ್ತಳೆ, ದಾಳಿಂಬೆ, ಪೇರ್, ಆಲಿವ್ ಹಣ್ಣುಗಳು, ತರಕಾರಿಗಳ ಸಲಾಡ್, ಗರಿಗರಿ ಗೋಧಿಯ ಪರೋಟಾ, ಖೂಸ್‌ಖೂಸ್ ಎಂಬ ರವೆಯಂಥ ಧಾನ್ಯದಲ್ಲಿ ತಯಾರಿಸಿದ ವ್ಯಂಜನ ಇತ್ಯಾದಿ ಆಹಾರಗಳು ಹಸಿವೆಯನ್ನು ಸುಲಭವಾಗಿ ನೀಗಿಸಿದವು ಮತ್ತು ಟಜೀನ್ (Tagine) ಎನ್ನುವ ಕೆಂಡದಲ್ಲಿ ಬೆಂದ ತರಕಾರಿಗಳು ಸಹ.

ಮರಕೇಶ್‌ನ ಮೊದಲನೇ ಆಕರ್ಷಣೆ ಬಹಿಯಾ (Bahia) ಅರಮನೆ. ಎರಡು ಎಕರೆಯ ಅರಮನೆ ಇಸ್ಲಾಮಿಕ್ ಮತ್ತು ಮೊರಾಕ್ಕನ್ ವಾಸ್ತುಶಿಲ್ಪಕ್ಕೆ ಕನ್ನಡಿ ಹಿಡಿದಿತ್ತು. ನನಗೆ ನಮ್ಮ ಉದಯಪುರ, ಜೈಪುರದ ಕೆತ್ತನೆ ಕುಸುರಿಯ ಜಾಣ್ಮೆಯನ್ನು ನೆನಪಿಸಿತು.

ಮೊರಾಕ್ಕೊ ವಂಶಾಡಳಿತ ರಾಜರ ಆಡಳಿತಗೊಳಪಟ್ಟಿದೆ. ಸರ್ಕಾರ, ನ್ಯಾಯಾಂಗ ಮತ್ತು ಸೇನೆ ಎಲ್ಲದರ ಮೇಲೂ ಅವರದೇ ಸರ್ವಾಧಿಪತ್ಯ. ಚುನಾವಣೆಯಿಂದ ಅವರ ಮಂತ್ರಿಗಳ ಆಯ್ಕೆ ನಡೆಯುತ್ತದೆಯಂತೆ. ಯಹೂದಿ, ಕ್ರೈಸ್ತ ಇತರೆ ಅನ್ಯಜಾತಿಗಳ ಮಂತ್ರಿಗಳೂ ರಾಜರಿಗೆ ಸಲಹೆ ನೀಡುತ್ತಾರೆ. ಇಲ್ಲಿ ಮಿಶ್ರ ಪ್ರಜಾಪ್ರಭುತ್ವದ ಪದ್ಧತಿ ಇದೆ ಎಂದು ಗೈಡು ವಿವರಿಸಿದ. ಬರ್ಬರ್ (Berber) ಅರಬರ ಜನಾಂಗದವರು ಮೊರಾಕ್ಕೊವಿನ ಹೆಚ್ಚಿನ ಪ್ರಜೆಗಳು. ಮುಸ್ಲಿಂ ಜನಾಂಗದ ಹೆಂಗಸರ ಮೇಲೆ ಕೆಲವು ದೇಶಗಳಲ್ಲಿ ಕಾಣಸಿಗುವ ನಿರ್ಬಂಧಗಳು ಈ ದೇಶದಲ್ಲಿ ಇರಲಿಲ್ಲ.

ರಸ್ತೆಗಳ ಎರಡು ಬದಿಗೂ ಅಸಂಖ್ಯಾತ ಹಣ್ಣುಗಳು ಜೋತಾಡುತ್ತಿರುವ ಕಿತ್ತಲೆ ಮರಗಳೂ, ಆಲಿವ್ ಗಿಡಗಳೂ, ಖರ್ಜೂರ ಮರಗಳ ಜೊತೆಜೊತೆಗೆ ತೂಗಾಡುತ್ತಿದ್ದವು. ಮಧ್ಯಾಹ್ನ ಮೆದೀನಾ ಜಾಗದಲ್ಲಿನ ಸೂಕ್ (Souk) ಎಂದು ಕರೆಯಲ್ಪಡುವ ಮಾರ್ಕೆಟ್‌ಗೆ ಭೇಟಿ ನೀಡಿದೆವು. ಮಾರ್ಕೆಟ್‌ನಲ್ಲಿ ಮೈಲುಗಟ್ಟಲೆ ಒಂದರ ಒಳಗೆ ಮತ್ತೊಂದು ಗಲ್ಲಿ ಚಾಚಿಕೊಂಡಿತ್ತು. 800–900 ವರ್ಷಗಳ ಹಿಂದೆ ಸಂಚಾರಿ ವ್ಯಾಪಾರಿಗಳು



ಬಹಿಯಾ ಅರಮನೆಯ ಒಳಾಂಗಣ ವಿನ್ಯಾಸ

ಪ್ರಪಂಚದ (ಭಾರತವೂ ಸೇರಿದಂತೆ) ಮೂಲೆಮೂಲೆಗಳಿಂದ ಸರಕನ್ನು ತಂದು ರಾಶಿ ಹಾಕಿ ಅಂಗಡಿಗಳ ಸಾಲು ಸಾಲುಗಳನ್ನು ನಿರ್ಮಿಸಿರುವುದು ಈಗಲೂ ಹಾಗೇ ಇದೆ. ಜನರಿಂದ ಗಿಜಿಗುಟ್ಟುತ್ತಿರುತ್ತದೆ.

ನಮ್ಮ ಚಿಕ್ಕಪೇಟೆ, ಅವೆನ್ಯೂ ರಸ್ತೆಗಿಂತ ಚಿಕ್ಕದಾದ ಓಣಿಗಳಲ್ಲಿ ರಸ್ತೆಗಳ ಎರಡೂ ಕಡೆ ಚಿಕ್ಕ ಚಿಕ್ಕ ಅಂಗಡಿಗಳಲ್ಲಿ ನಮಗೆ ಸಿಗದಿರುವ ವಸ್ತುಗಳೇ ಇಲ್ಲ. ಈ ಕಿರಿದಾದ ಹಾಸುಗಲ್ಲಿನ ರಸ್ತೆಗಳಲ್ಲಿ ದ್ವಿಮುಖ ಸಂಚಾರದಲ್ಲಿ ಅಸಂಖ್ಯಾತ ಸ್ಕೂಟರ್ ಸವಾರರೂ (ಹಿಡಿಸಲಾರದಷ್ಟು ಸಾಮಾನುಗಳನ್ನು ಹಿಂಬದಿಗೆ ಕಟ್ಟಿ) ಸೇರಿ ನಮ್ಮ ಕೈ ಕಾಲುಗಳು, ಪ್ರಾಣದ ಭದ್ರತೆಗೆ ಸವಾಲೊಡ್ಡಿತು.

ಭಾರತದ ಅನೇಕ ರಾಜ ಮಹಾರಾಜರು ಈಗಲೂ ಮರಕೇಶ್ ಮತ್ತು ಇತರ ನಗರಗಳಲ್ಲಿ ಅರಮನೆಗಳನ್ನು ಹೊಂದಿದ್ದಾರಂತೆ. ವಸಂತಕಾಲದಲ್ಲಿ ಪ್ರತಿವರ್ಷ ಬರುತ್ತಿರುತ್ತಾರಂತೆ. ಹತ್ತಾರು ಸಾವಿರ ವರ್ಷಗಳ ಹಿಂದೆ ನಮ್ಮ ಮತ್ತು ಮೊರಾಕ್ಕೊ ಜನಾಂಗದವರ ರಕ್ತದ ಜೀನ್ ಒಂದೇ ಆಗಿದ್ದವೆಂದು ಗೈಡು ಹೇಳಿದಾಗ ವಿಸ್ಮಯವಾಯಿತು. ನಮ್ಮ ಚಂದಮಾಮ, ಬಾಲಮಿತ್ರ ಕಥೆಗಳಲ್ಲಿ ಮೊರಾಕ್ಕೊ ರಾಜರ ಕಥೆಗಳನ್ನು ಓದಿದ ನೆನಪಾಯಿತು.

1956ರಲ್ಲಿ ಮೊರಾಕ್ಕೊವಿಗೆ ಸ್ವಾತಂತ್ರ್ಯ ಸಿಗುವ ಮೊದಲು 40–50 ವರ್ಷಗಳ ಕಾಲ ಫ್ರೆಂಚ್ ಆಧಿಪತ್ಯ ಅಲ್ಲಿ ಇದ್ದದ್ದರಿಂದ, ಈಗಲೂ ಎಲ್ಲೆಲ್ಲೂ ಅರೇಬಿಕ್ ಜೊತೆಗೆ ಫ್ರೆಂಚ್ ಭಾಷೆಯ ಫಲಕಗಳು ಮಾತ್ರ ರಾರಾಜಿಸುತ್ತವೆ. ಇಂಗ್ಲಿಷ್ ಫಲಕಗಳನ್ನು ಅಪರೂಪಕ್ಕೆ ಕಾಣುತ್ತೇವೆ.

ಹೋಟೆಲಲ್ಲಿ ಮಧ್ಯಾಹ್ನದ ಮೇಲೆ ಹಮಾಮ್ ಎಂದು ಕರೆಯುವ ಹಬೆಯ ಸ್ನಾನ ಮತ್ತು ಮಸಾಜುಗಳು ದಣಿದಿದ್ದ ದೇಹಗಳಿಗೆ ಪುನಃಚೇತನ ನೀಡಿದವು. ನನ್ನ ಪುಟ್ಟ ಮೊಮ್ಮಕ್ಕಳಿಗೆ ಕರೀ ಸೋಪಿನ ಹಮಾಮ್ ಹೊಸ ಅನುಭವವನ್ನೇ ಸೃಷ್ಟಿಸಿತು.

ಸುಂದರ ನೀಲ, 'ಜಾರ್ಡಿನ್ ಮಜೊರೆಲ್ಲಾ'